# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲು: 19 / ಪಿಡಬ್ಲು: 9

ದಿನಾಂಕ: 31.12.2024

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಅವಿನಾಶಸಿಂಗ ಬ್ಯಾಳಿ |
| ತಂದೆ ಹೆಸರು | : | ಗೋಪಾಲಸಿಂಗ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಪೋಲೀಸ ಪೇದೆ ನಂ. 520, ಬೆಟಗೇರಿ ಬಡಾವಣೆ ಪೋಲೀಸ ಠಾಣೆ |
| ವಾಸ ಸ್ಥಳ | : | ಬೆಟಗೇರಿ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ನಾನು 2019 ರಿಂದ ಅಗಷ್ಟ – 2024 ರ ವರೆಗೆ ಮುಂಡರಗಿ ಪೋಲೀಸ ಠಾಣೆಯಲ್ಲಿ ಪೋಲೀಸ ಪೇದೆಯಾಗಿ ಕೆಲಸ ಮಾಡಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿನಾಂಕ: 05.03.2022 ರಂದು ಚಾಸಾ-29 ರವರು ನನಗೆ ಮೃತ ಸೋಮಲೆಪ್ಪ ನಾಯಕ ಇವರ ಶವದ ಮರಣೋತ್ತರ ಪರೀಕ್ಷೆ ಮಾಡಿಸಬೇಕೆಂದು ಆದೇಶವನ್ನು ಮಾಡಿದ್ದರು.

3. ಆ ಪ್ರಕಾರ ನಾನು ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿ ಅಲ್ಲಿದ್ದ ಮೃತ ಸೋಮಲೆಪ್ಪ ನಾಯಕ ಇವರ ಶವದ ಮರಣೋತ್ತರ ಪರೀಕ್ಷೆಯನ್ನು ಮಾಡಿಸಿ, ಶವವನ್ನು ಅದರ ವಾರಸುದಾರರಿಗೆ ಕೊಟ್ಟು ಅವರಿಂದ ಪಾವತಿ ಬೇಸ್ಮಿಯನ್ನು ಪಡೆದುಕೊಂಡಿರುತ್ತೇನೆ.

4. ವೈದ್ಯರು ಮರಣೋತ್ತರ ಕಾಲಕ್ಕೆ ಕಾಯ್ದಿರಿಸಿದ ಶವದ ಮೈಮೇಲಿನ ರಕ್ತ ಹತ್ತಿದ ಬಟ್ಟೆಗಳಾದ ಬನಿಯನ, ಲುಂಗಿ ಹಾಗೂ ಚಡ್ಡಿಯನ್ನು ಕೊಟ್ಟಿದ್ದು, ಅವುಗಳನ್ನು ತಂದು ಚಾಸಾ-29 ರವರ ಮುಂದೆ ಹಾಜರಪಡಿಸಿರುತ್ತೇನೆ. ಚಾಸಾ-29 ರವರು ಸದರಿ ಬಟ್ಟೆಗಳನ್ನು ಪಂಚರಾದ ಚಾಸಾ-7 ಮತ್ತು ಪ್ರಾಸಾ-4 ರವರ ಸಮಕ್ಷಮ ರಾತ್ರಿ 09.00 ಗಂಟೆಯಿಂದ ಒಂದು ತಾಸಿನ ವರೆಗೆ ಪಂಚನಾಮೆ ಮಾಡಿ ಆ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತಾರೆ. ಈಗ ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು

**ನಿಪಿ-11(ಬಿ) ಎಂದು ಗುರುತಿಸಲಾಯಿತು.**

5. ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ. 2 ರಿಂದ 4 ಎಂದು ಗುರುತಿಸಲಾಗಿರುತ್ತದೆ.

6. ಈ ಬಗ್ಗೆ ನಾನು ಚಾಸಾ-29 ರವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟಿ ಸವಾಲುಃ ಶ್ರೀ ಎಂ.ಕೆ. ಚವಡಿ ವಕೀಲರಿಂದ ಶ್ರೀ ಸಿ.ಎಸ್. ಸಂಕನಗೌಡರ, ಆರೋಪಿ ಪರ ವಕೀಲರ ಪರವಾಗಿಃ**

7. ಚಾಸಾ-29 ರವರು ನನಗೆ ಮೌಖಿಕವಾಗಿ ಆದೇಶವನ್ನು ಮಾಡಿದ್ದರು. ಶವವನ್ನು ನನ್ನ ವಶಕ್ಕೆ ಕೊಟ್ಟಾಗ, ಸಮಯ ಸಂಜೆ 04.00 ಗಂಟೆಯಾಗಿತ್ತು. ಶವವನ್ನು ಅದರ ವಾರಸುದಾರರಿಗೆ ಕೊಟ್ಟಾಗ, ಸಮಯ ಸಂಜೆ 04.15 ಗಂಟೆಯಾಗಿತ್ತು.

8. ಮು.ಮಾ. 2 ರಿಂದ 4 ರಂತಹ ಬಟ್ಟೆಗಳು ಎಲ್ಲಾ ಕಡೆಗೆ ಸಿಗುತ್ತವೆ ಎಂದರೆ ಸರಿ. ಈ ಪ್ರಕರಣದಲ್ಲಿ ನಾನು ಯಾವುದೇ ಕರ್ತವ್ಯ ನಿರ್ವಹಿಸದೇ ಇದ್ದರೂ ಕೂಡಾ, ನಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಾನು ಠಾಣೆಗೆ ಬಂದಾಗ, ಚಾಸಾ-7 ಮತ್ತು ಪ್ರಾಸಾ-4 ರವರು ಠಾಣೆಯಲ್ಲಿ ಇದ್ದರು. ದಿಃ 05.03.2022 ರಂದು ನಾನು ಚಾಸಾ-29 ರವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಮು.ಮಾ. 2 ರಿಂದ 4 ಕ್ಕೂ, ಆರೋಪಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಮತ್ತು ಮು.ಮಾ.2 ರಿಂದ 4 ನ್ನು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

10. ದಿನಾಂಕಃ 05.03.2022 ರಂದು ಚಾಸಾ-29 ರವರು ನನಗೆ ಮೃತ ಸೋಮಲೆಪ್ಪ ನಾಯಕ ಇವರ ಶವದ ಮರಣೋತ್ತರ ಪರೀಕ್ಷೆ ಮಾಡಿಸಬೇಕೆಂದು ಆದೇಶವನ್ನು ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ನಾನು ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿ ಅಲ್ಲಿದ್ದ ಮೃತ ಸೋಮಲೆಪ್ಪ ನಾಯಕ ಇವರ ಶವದ ಮರಣೋತ್ತರ ಪರೀಕ್ಷೆಯನ್ನು ಮಾಡಿಸಿ, ಶವವನ್ನು ಅದರ ವಾರಸುದಾರರಿಗೆ ಕೊಟ್ಟು ಅವರಿಂದ ಪಾವತಿ ಬೇಸ್ಮಿಯನ್ನು ಪಡೆದುಕೊಂಡಿರುತ್ತೇನೆ.

12. ವೈದ್ಯರು ಮರಣೋತ್ತರ ಕಾಲಕ್ಕೆ ಕಾಯ್ದಿರಿಸಿದ ಶವದ ಮೈಮೇಲಿನ ರಕ್ತ ಹತ್ತಿದ ಬಟ್ಟೆಗಳಾದ ಬನಿಯನ, ಲುಂಗಿ ಹಾಗೂ ಚಡ್ಡಿಯನ್ನು ಕೊಟ್ಟಿದ್ದು, ಅವುಗಳನ್ನು ತಂದು ಚಾಸಾ-29

ರವರ ಮುಂದೆ ಹಾಜರಪಡಿಸಿರುತ್ತೇನೆ ಮತ್ತು ಚಾಸಾ-29 ರವರು ಸದರಿ ಬಟ್ಟೆಗಳನ್ನು ಪಂಚರಾದ ಚಾಸಾ-7 ಮತ್ತು ಫ್ರಾಸಾ-4 ರವರ ಸಮಕ್ಷಮ ರಾತ್ರಿ 09.00 ಗಂಟೆಯಿಂದ ಒಂದು ತಾಸಿನ ವರೆಗೆ ಪಂಚನಾಮೆ ಮಾಡಿ ಆ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ನಾನು ಚಾಸಾ-29 ರವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**